

# ವಿನೂತನ ಪರಿಸರ ಜಾಗೃತಿ

ಹಾ! ಇದೇನು ವಿಶ್ವಸುಂದರಿಯ ಮುಡಿಗೇರಿಸುವ ಹೊಸ ತರಹದ ಕಿರೀಟ ಎಂದು ಭಾವಿಸಿದಿರಾ? ನಿಮ್ಮ ಊಹೆ ತಪ್ಪು. ಇನ್ನೊಮ್ಮೆ ಸೂಕ್ಷ್ಮವಾಗಿ ಗಮನಿಸಿ. ಇದು ಇಂದು ಪ್ರಜ್ಞಾವಂತ ನಾಗರಿಕರು ಪ್ರತಿದಿನ ಬಳಸುವ ಶುದ್ಧ ಕುಡಿಯುವ ನೀರಿನ ಹಾಗೂ ವಿವಿಧ ಪಾನೀಯಗಳ ಬಾಟಲಿಗಳ ಮುಚ್ಚಳಗಳಿಂದ ತಯಾರಾದ ಆಕೃತಿ.

ಹೊಸನಗರ ತಾಲ್ಲೂಕಿನ 'ಸಾರ' ಸಂಸ್ಥೆಯ ಪರಿಸರ ಕಾಳಜಿಯ ಕಲಾಕಾರ ಎಚ್.ಜಿ. ಅರುಣ್‌ಕುಮಾರ್ ಕೈಯಿಂದ ಸಿದ್ಧಗೊಂಡ ವಿವಿಧ ಬಾಟಲು ಮುಚ್ಚಳಗಳ ವಿಶೇಷ ಆಕೃತಿ ಇದು. ರವಿ ಕಾಣದ್ದನ್ನು ಕವಿ ಕಾಣುತ್ತಾನೆ; ಕವಿ ಕಾಣದ್ದನ್ನು ಕಲಾವಿದರೂ ಕಾಣುತ್ತಾರೆ ಅನ್ನುವಂತಿದೆ ಮೇಲಿನ ಚಿತ್ರ. ಹಸ್ತಕಲೆ, ಮಣ್ಣಿನಕಲೆ, ಕಾಷ್ಠಕಲೆ, ಶಿಲ್ಪಕಲೆಗಳಿಂದ ಕೂಡಿದ ದೊಡ್ಡ ಕಲಾಗ್ಯಾಲರಿಯನ್ನು ಸ್ಥಾಪಿಸಿದ ಮುಖ್ಯ ಉದ್ದೇಶ ಪರಿಸರ ಸಂರಕ್ಷಣೆಯ ಪ್ರಜ್ಞೆ, ಜನಮಾನಸದಲ್ಲಿ ಮೂಡಿಸುವುದು.

ಜನನಿಬಿಡ ಪ್ರದೇಶದಲ್ಲಿ ಅನಾಥವಾಗಿ ಬಿದ್ದಿದ್ದ ವಿವಿಧ ಪ್ಲಾಸ್ಟಿಕ್ ಬಾಟಲಿಗಳ ಮುಚ್ಚಳಗಳನ್ನು ಸಂಗ್ರಹಿಸಿ ಪ್ರಕೃತಿ, ಭೂಮಿ, ಗುಡ್ಡಬೆಟ್ಟ, ಕಾಡುನದಿ ಮೊದಲಾದ ಆಕೃತಿಗಳನ್ನು ಸೃಜಿಸಿ ದೇಶವಿದೇಶಗಳಲ್ಲಿ ಕಲಾ ಪ್ರದರ್ಶನ ಏರ್ಪಡಿಸಿ ಪರಿಸರಕ್ಕೆ ಆಗುವ ಹಾನಿಯನ್ನು ಎತ್ತಿ ತೋರಿಸುತ್ತಿದ್ದಾರೆ. ಇಂತಹ ಕಲಾಕೃತಿಗೆ 'Tapestry' ಕಲೆ (ಕೈಯಿಂದ ಪೋಣಿಸಲ್ಪಟ್ಟ ವಿವಿಧ ಬಣ್ಣಗಳ ಕಲಾಕೃತಿ) ಎನ್ನುತ್ತಾರೆ. ಇದು ಶ್ರಮದಾಯಕ ಆದರೂ ಸೃಜನಶೀಲ ಕಲಾಕೃತಿ. ಇದನ್ನು 84X120X144 ಇಂಚುಗಳ ಸುತ್ತಳತೆಯುಳ ಸುಮಾರು ಒಂದು ಲಕ್ಷ ಬಾಟಲು ಮುಚ್ಚಳಗಳನ್ನು ಸರಿಗೆಯಿಂದ (ಸ್ಟೀಲ್‌ವೈರ್) ಪೋಣಿಸಿ ಸಿದ್ಧಗೊಳಿಸಿದ್ದಾರೆ.

ಇಂತಹ ಮುಚ್ಚಳಗಳನ್ನು ಹೀಗೆಯೇ ಅಲ್ಲಲ್ಲಿ ಎಸೆದರೆ ಅವುಗಳು ಮುಂದೆ ಪರಿಸರ, ನದಿ, ಸಮುದ್ರಗಳನ್ನು ಸೇರಿ ಸಣ್ಣಸಣ್ಣ ತುಣುಕುಗಳಾಗಿ ಮಾರ್ಪಟ್ಟು ವಿವಿಧ ಮುಗ್ಧ ಜಲಚರಗಳ ಹೊಟ್ಟೆ ಸೇರಿ ಅವುಗಳನ್ನು ನಾಶಗೊಳಿಸುತ್ತವೆ. ಈ ಪರಿಸರ ನಾಶ ಕಾಯಕದಲ್ಲಿ ನಮ್ಮ ಕೈವಾಡವೂ ಇದೆ ಎಂಬುದನ್ನು ಎಚ್ಚರಿಸುತ್ತಾ ಇಂತಹ ಏಕ ಬಳಕೆಯ ಪ್ಲಾಸ್ಟಿಕ್ ಬಾಟಲುಗಳನ್ನು ಉಪಯೋಗಿಸದೇ ಇರುವ ಅಥವಾ ಬಾಟಲುಗಳನ್ನು ಅನಾಗರಿಕರಾಗಿ ಎಲ್ಲೆಂದರಲ್ಲಿ ಬಿಸಾಡಿ ಪ್ರಕೃತಿಯನ್ನು ವಿರೂಪಗೊಳಿಸದಿರುವಂತಾಗಲಿ ಎಂಬುದೇ ಕಲಾಕಾರನ ಈ ಕಲಾ ರಚನೆಯ ಹಿಂದಿರುವ ಕಳಕಳಿ.

—ಟಿ. ಕೃಷ್ಣಮೂರ್ತಿ, ಉಜಿರೆ

# ಕೊಟ್ಟಿಗೆಗೆ ಹಸಿರು ಛಾವಣಿ

ಮಲೆನಾಡಿನಲ್ಲಿ ಸಾಮಾನ್ಯವಾಗಿ ಜೂನ್ ತಿಂಗಳಿಂದ ಅಕ್ಟೋಬರ್‌ವರೆಗೆ ಮಳೆ ಬರುತ್ತದೆ. ಅದರಲ್ಲೂ ಜುಲೈ ಆಗಸ್ಟ್ ತಿಂಗಳಲ್ಲಿ ಸತತವಾಗಿ ಮಳೆ ಸುರಿಯುತ್ತಲೇ ಇರುತ್ತದೆ. ಇಂತಹ ಸಂದರ್ಭದಲ್ಲಿ ಅಲ್ಲಿಗೆ ಹೋದಾಗ ಸಿಮೆಂಟ್ ಶೀಟು ಹೊದಿಸಿದ ಮನೆಯ ಮಾಡು, ಕೊಟ್ಟಿಗೆಯ ಛಾವಣಿಯ ಮೇಲೆ ಮೆತ್ತನೆಯ ಹಸಿರು ಹುಲ್ಲುಹಾಸು ಹಾಸಿದಂತೆ ಕಾಣಿಸುತ್ತಿತ್ತು. ನಗರದ ಉದ್ಯಾನಗಳಲ್ಲಿ ನೆಲದ ಮೇಲೆ ನಾವು ಈ ರೀತಿಯ ಹುಲ್ಲುಹಾಸನ್ನು ಕಾಣುತ್ತೇವೆ. ಇತ್ತೀಚೆಗೆ ಮಲೆನಾಡಿನ ಸಂಬಂಧಿಕರ ಮನೆಗೆ ಹೋದಾಗ ಅವರ ಕೊಟ್ಟಿಗೆಯ ಸಿಮೆಂಟ್ ಶೀಟ್ ಛಾವಣಿಯ ಮೇಲೆ ಸತತ ಮಳೆಯಿಂದಾಗಿ ಪಾಚಿಯು ಹಸಿರು ಹೊದಿಕೆಯಂತೆ ಬೆಳೆದಿದೆ. ಇದು ನೋಡಲು ಸುಂದರವಾಗಿ ಕಾಣಿಸಿತು. ಮಳೆಗಾಲದಲ್ಲಿ ಹುಟ್ಟಿ ಬೆಳೆಯುವ ಚಿಟ್ಟೆ ಹೂವಿನ ಗಿಡಗಳೂ ಅದರ ಮೇಲೆ ಬೆಳೆದು ಗುಲಾಬಿ ಬಣ್ಣದ ಹೂವು ಬಿಟ್ಟಿದ್ದವು.

—ಶಾಲಿನಿ ನಾಯಕ್, ಬೆಂಗಳೂರು





